# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Kanigiri Renewable Private Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 3ನೇ ವ್ಯಕ್ತಿ/ಸ್ವಂತ ಬಳಕೆ ಅಡಿಯಲ್ಲಿ 37.8 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಇಎನ್ 283 ಎನ್‌ಸಿಇ 2016 ದಿನಾಂಕ:13.02.2017.
2) ಸರ್ಕಾರದ ಆದೇಶ ಸಂಖ್ಯೆ: ಇಎನ್ 528 ಎನ್‌ಸಿಇ 2018 ದಿನಾಂಕ:27.09.2018.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: 1751-ಕೆ.

* * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದ ಮೂಲಕ M/s Kumathe Renewable Energy Private Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದ ಮೂಲಕ ಸದರಿ ಪವನ ವಿದ್ಯುತ್ ಯೋಜನೆಯನ್ನು ಕೆಲವು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು M/s Kumathe Renewable Energy Private Limited ಕಂಪನಿಯಿಂದ M/s Kanigiri Renewable Private Limited ಕಂಪನಿಗೆ ಸ್ವಂತ ಬಳಕೆ / 3ನೇ ವ್ಯಕ್ತಿಗೆ ಮಾರಾಟ ಮಾಡುವ ಉದ್ದೇಶಕ್ಕಾಗಿ ವರ್ಗಾಯಿಸಲಾಗಿರುತ್ತದೆ.

M/s Kanigiri Renewable Private Limited ಕಂಪನಿಗೆ ಈಗಾಗಲೇ ವರ್ಗಾವಣೆಯ ಮೂಲಕ ಹಂಚಿಕೆ ಮಾಡಲಾಗಿರುವ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು / ಸ್ವಂತಕ್ಕೆ ಉಪಯೋಗಿಸಿಕೊಳ್ಳುವ ಪ್ರವರ್ಗದಡಿಯಲ್ಲಿ 37.8 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತಂತೆ ವಿವರವಾದ ಯೋಜನಾ ವರದಿಯನ್ನು ಹಾಗೂ ಯೋಜನೆಯ ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ಡಿಪಿಆರ್ ಶುಲ್ಕವನ್ನು ಜಿಎಸ್‌ಟಿ.ಯೊಂದಿಗೆ ಪಾವತಿಸಿರುವುದನ್ನು ಪರಿಶೀಲಿಸಿದ್ದು, M/s Kanigiri Renewable Private Limited ಕಂಪನಿಯು ದಿನಾಂಕ:06.11.2017 ರಂದು Registrar of Companies, Ministry of Corporate Affairs, Government of India, Chennai ಇವರಲ್ಲಿ CIN ಸಂಖ್ಯೆ No.U31906TN2017PTC119387 ರಡಿಯಲ್ಲಿ ನೋಂದಣಿಯಾಗಿರುತ್ತದೆ. ಸದರಿ ಕಂಪನಿಯು M/s Siemens Gamesa Renewable Private Limited ಕಂಪನಿಯ ಅಂಗ ಸಂಸ್ಥೆಯಾಗಿದ್ದು, ಇವರ ನೆಟ್‌ವರ್ತ್ ದಿನಾಂಕ:31.03.2018 ರ ಅಂತ್ಯಕ್ಕೆ ರೂ.2667.27 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಸಲ್ಲಿಸಿರುತ್ತಾರೆ. ಸದರಿ ಯೋಜನೆಗೆ ಸಂಬಂಧಿಸಿದ ತಾಂತ್ರಿಕ

Copy Attested under RTI



Asst. Public Information Officer
KREDL

. ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ವಿವರಗಳೊಂದಿಗೆ M/s Kanigiri Renewable Private Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು ಈ ಕೆಳಕಂಡ ಶೆಡ್ಯೂಲ್‌ನಲ್ಲಿರುವಂತೆ 37.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಲು ಏಕ ಕಡತ ಪದ್ಧತಿಯಡಿ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಡತದ ಮೂಲಕ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಶಿಫಾರಸ್ಸು ಮಾಡಿರುತ್ತಾರೆ.

Geographical area description for 37.8 MW capacity Wind Power Project of M/s Kanigiri Renewable Private Limited

| Sanction capacity in MW | Enhancement proposed in MW | Total capacity in MW | Near by villages of the proposed area and district | Geographical area description of the project |
|---|---|---|---|---|
| 10 | 27.8 | 37.8 MW (18 Nos x 2100kw) | Anaburu, Chikka Kumatalakunta, Hirekumhalkunta, Jagalur Taluk, Davangere district. | The proposed area is convered Anaburu. The area Surrounded by Point (A-B-C-D-E-F-G-A) and held in the following Geographical co-ordinates as:<br>Point A: Lat 14°34'39.18'' – Long: 76°24'23.97''N<br>Point B: Lat 14°34'53.61'' – Long: 76°24'14.83''N<br>Point C: Lat 14°35'5.46'' – Long: 76°23'48.12''N<br>Point D: Lat 14°36'31.89'' – Long: 76°23'27.85''N<br>Point E: Lat 14°38'16.51'' – Long: 76°24'53.35''N<br>Point F: Lat 14°37'14.70'' – Long: 76°26'29.36''N<br>Point G: Lat 14°34'35.76'' – Long: 76°25'36.91''N<br>Peaks: 694, 668, 657, 656 & 680m AMSL. |
| | **Total** | **37.8 MW** | | |

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 72 ಎನ್‌ಸಿಇ 2019, ಬೆಂಗಳೂರು, ದಿನಾಂಕ:13.02.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, M/s Kanigiri Renewable Private Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಅಣಬೂರು, ಚಿಕ್ಕಕುಮಟಲಕುಂಟೆ ಮತ್ತು ಹಿರೇಕುಮಲಕುಂಟೆ ಗ್ರಾಮಗಳಲ್ಲಿ .ವರ್ಗಾವಣೆಯ ಮೂಲಕ ಹಂಚಿಕೆಯಾಗಿರುವ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡುವ / ಸ್ವಂತ ಬಳಕೆ ಆಧಿಯಲ್ಲಿ ಈ ಕೆಳಕಂಡ ಶೆಡ್ಯೂಲ್‌ನಲ್ಲಿರುವಂತೆ 37.8 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಲಾಗಿದೆ.

Geographical area description for 37.8 MW capacity Wind Power Project of M/s Kanigiri Renewable Private Limited

| Sanction capacity in MW | Enhancement proposed in MW | Total capacity in MW | Near by villages of the proposed area and district | Geographical area description of the project |
|---|---|---|---|---|
| 10 | 27.8 | 37.8 MW (18 Nos x 2100kw) | Anaburu, Chikka Kumatalakunta, Hirekumbalkunta, Jagalur Taluk, | The proposed area is convered Anaburu. The area Surrounded by Point (A-B-C-D-E-F-G-A) and held in the following Geographical co-ordinates as: |

Copy Attested under RTI

Asst. Public Information Officer-3)
KREDL

| | | | | |
|---|---|---|---|---|
| | | | Davangere district. | Point A: Lat 14°34'39.18'' – Long: 76°24'23.97''N<br>Point B: Lat 14°34'53.61'' – Long: 76°24'14.83''N<br>Point C: Lat 14°35'5.46'' – Long: 76°23'48.12''N<br>Point D: Lat 14°36'31.89'' – Long: 76°23'27.85''N<br>Point E: Lat 14°38'16.51'' – Long: 76°24'53.35''N<br>Point F: Lat 14°37'14.70'' – Long: 76°26'29.36''N<br>Point G: Lat 14°34'35.76'' – Long: 76°25'36.91''N<br><br>Peaks: 694, 668, 657, 656 & 680m AMSL. |
| | **Total** | **37.8 MW** | | |

**ಷರತ್ತುಗಳು**

1. M/s Kanigiri Renewable Private Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ : ಇಎನ್ 435 ಎನ್‌ಸಿಇ 2011, ದಿನಾಂಕ 06.1.2012 ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2. M/s Kanigiri Renewable Private Limited ಕಂಪನಿಯು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಸ್ವಂತ ಬಳಕೆ (Captive Consumption) / 3ನೇ ವ್ಯಕ್ತಿಗೆ ಮಾರಾಟ ಮಾಡುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸುವ ಸಲುವಾಗಿ ಕೆಪಿಟಿಸಿಎಲ್‌ನೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಿದೆ.

3. ಈ ಆದೇಶವನ್ನು ರದ್ದು ಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಉಳಿದಂತೆ, ವಿದ್ಯುತ್ ಖರೀದಿ ಒಪ್ಪಂದವನ್ನು ಹೊರತುಪಡಿಸಿ ಸರ್ಕಾರದ ಮೂಲ ಹಂಚಿಕೆ ಆದೇಶ ಸಂಖ್ಯೆ: ಇಎನ್ 283 ಎನ್‌ಸಿಇ 2016 ದಿನಾಂಕ:13.02.2017 ಮತ್ತು ಸರ್ಕಾರದ ಆದೇಶ ಸಂಖ್ಯೆ: ಇಎನ್ 528 ಎನ್‌ಸಿಇ 2018 ದಿನಾಂಕ:27.09.2018 ರಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಇವರಿಗೆ:- ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.

Copy Attested under RTI
Asst. Public Information Officer
KREDL

5 ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.

6 ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ.

7 ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ ಪ್ರಾದೇಶಿಕ ವಿಭಾಗ.

8 ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

9 M/s Kollapur Renewable Private Limited, The Futura, Block B, 8th Floor, No.334, Rajiv Gandhi Salai, Sholinganallur, Chennai – 600 119, Tamilnadu.

10 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.

11 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.

12 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

Copy Attested under RTI

Asst. Public Information Officer
KREDL